**ದಿ :04-11-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆ:- ವಾದಿ ಪರ ವಕೀಲವರಿಂದ**

1) ವಿಜಯ ಟ್ರೇಡರ್ಸ್‌ನವರಿಗೆ ನಮ್ಮ ಫೌಲ್ಟ್ರಿಯಿಂದ ಮೊಟ್ಟೆ ಕಳಿಸಿದ ಬಗ್ಗೆ ಕ್ಯಾಶ್ **invoice** ಮತ್ತು ನಮ್ಮ ಕಂಪನಿಯ ಲೆಡ್ಜರ್ ಖಾತೆಯನ್ನು ಹಾಜರು ಮಾಡಿದ್ದೇನೆ.

ಸದರಿ ದಾಖಲೆಗಳನ್ನು ಕ್ರಮವಾಗಿ ನಿ. ಡಿ- **3** ಮತ್ತು **4** ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ವಾದಿ ಪರ ವಕೀಲರಾದ ಎಂ. ಎಂ. ಹೆಚ್ ರವರಿಂದ**

ದಾವೆಯನ್ನು ಯಾರ ಯಾರ ವಿರುದ್ಧ ಮತ್ತು ಯಾವ ಪರಿಹಾರವನ್ನು ಕೋರಿ ಸಲ್ಲಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ. ನನಗೆ ಪ್ರತಿವಾದಿಯಾದ ಅಬ್ದುಲ್ ರಜಾಕ್ ಗೊತ್ತಿಲ್ಲ. ನನಗೆ ನ್ಯಾಯಾಲಯದಿಂದ ನಿಡಿ-**3**ನ್ನು ಮಾತ್ತ ಹಾಜರು ಮಾಡಲು ಸಮನ್ಸ್ ಬಂದಿತ್ತು ಎಂದರೆ ಸರಿ. ನಿಡಿ-**4**ನ್ನು ಹಾಜರುಪಡಿಸಲು ನನಗೆ ನ್ಯಾಯಾಲಯದ ಆದೇಶ ಇರಲಿಲ್ಲಿ ಎಂದರೆ ಸರಿ. ನಿಡಿ-**4**ರಲ್ಲಿ ನಮೂದಿಸಿದ ವ್ಯವಹಾರಗಳನ್ನು ಲೆಕ್ಕಾಧಿಕಾರಿಯಾದ ಪೂಜಾ ಎನ್ನುವವರು ನಮೂದಿಸಿರುತ್ತಾರೆ. ನಿಡಿ-**4** ಲೆಡ್ಜರ್ ಪುಸ್ತಕದಲ್ಲಿ ನಮೂದಿಸುವ ಮೊದಲು ದಿನವಹಿ ಪುಸ್ತಕದಲ್ಲಿ ಲೆಕ್ಕವನ್ನು ಬರೆಯಲಾಗುತ್ತದೆ. ದಿನವಹಿ ಪುಸ್ತಕದಲ್ಲಿ ಮತ್ತು ನಿಡಿ-**4** ಲೆಡ್ಜರ್ ಪುಸ್ತಕದಲ್ಲಿ ನಮೂದುಗಳನ್ನು ನಾನು ಪರೀಲಿಸುವುದಿಲ್ಲ. ಮೂಲ ಲೆಡ್ಜರ್ ಪುಸ್ತಕದ ನಮೂದುಗಳನ್ನು ನಾನು ನಿಡಿ-**4** ರ ನಮೂದಿನ ಜೊತೆ ಹೋಲಿಕೆ ಮಾಡಿ ನೋಡಿರುವುದಿಲ್ಲ. ದಿನವಹಿ ಪುಸ್ತಕ ಮತ್ತು ಲೆಡ್ಜರ್ ಪುಸ್ತಕದಲ್ಲಿ ಕಂಪನಿಗಳ ಹೆಸರುಗಳನ್ನು ಮಾತ್ರ ಬರೆದಿರುತ್ತೇವೆ ಹಾಗೂ ಅದರ ಮಾಲೀಕರ ಹೆಸರುಗಳನ್ನು ಬರೆಯುವುದಿಲ್ಲ. ಬೇಕಾದಾಗ ನಮಗೆ ಫೋನ್ ಮುಖಾಂತರ ಮಾತ್ರ ಹೇಳುತ್ತಾರೆ.

ಗ್ರಾಹಕರು ಬೇಡಿದ ಸರಕುಗಳಿಗೆ ಸಂಬಧಿಸಿದಂತೆ ಬೇಡಿಕೆಗಳನ್ನು ನಾವು ಯಾವುದೇ ಪುಸ್ತಕದಲ್ಲಿ ಬರೆದುಕೊಂಡಿರುವುದಿಲ್ಲ. ಹಣ ಸಂದಾಯ ಮಾಡಿದವರಿಗೆ ಮಾತ್ರ ಬಿಲ್ಲುಗಳನ್ನು ನೀಡುತ್ತೇವೆ ಎಂದರೆ ಸರಿ. ನಿಡಿ-**4**ಲ್ಲಿ ನಮೂದಿಸಿರುವ ದಿನಾಂಕ **30-09-2021**ರ ವ್ಯವಹಾರವಲ್ಲದೇ ಇತರೆ ವ್ಯವಹಾರಗಳಿಗೆ ಸಂಬಂಧಿಸಿದ ಬಿಲ್ಲುಗಳು ಸಹಾ ನಮ್ಮ ಬಳಿ ಇರುತ್ತದೆ. ಅವುಗಳನ್ನು ಈ ದಿನ ತಂದಿರುವುದಿಲ್ಲ. ನಿಡಿ-**4**ಲ್ಲಿ ತೋರಿಸಿದ ದಿನಾಂಕ **30-09-2021** ರಂದು ತೋರಿಸಿದ ರೂ. **5,71,740/-** ರ ವ್ಯವಹಾರವನ್ನು ಬಿಟ್ಟು ಇತರೆ ವ್ಯವಹಾರಗಳು ವಾದಿಗೆ ಸಂಬಂಧಿಸಿಲ್ಲ ಎಂದರೆ ಸರಿಯಿಲ್ಲ. ನಿಡಿ-**3**ರಲ್ಲಿ ತೋರಿಸಿರುವ ಸರಕನ್ನು ಲಾರಿಯ ಮುಖಾಂತರ ಪ್ರತಿವಾದಿಯಾದ ಮಹಮ್ಮದ್ ಅಬ್ಲುದಲ್ ರಜಾಕ್ ಅಖ್ತಾರನಿಗೆ ಕಳುಹಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ವಿಜಯ ಟ್ರೇಡಿಂಗ್ ಕಂಪನಿಗೆ ಕಳುಹಿಸಿದ್ದೇನೆ ಎಂದು ಹೇಳುತ್ತಾರೆ. ನಿಡಿ-**3**ರಲ್ಲಿ ತೋರಿಸಿದ ಸರಕನ್ನು ಲಾರಿಯ ಚಾಲಕ ಮತ್ತು ಕ್ಲೀನರ್ ಬಂದು ತೆಗೆದುಕೊಂಡು ಹೋಗಿರುತ್ತಾರೇ. ಅವರ ಹೆಸರ ಗೊತ್ತಿಲ್ಲ. ನಿಡಿ-**3**ರಡಿ ಕಳುಹಿಸಿದ ಸರಕಿಗೆ ಸಂಬಂಧಿಸಿದಂತೆ ಹಣಕ್ಕಾಗಿ ವಿಜಯ ಟ್ರೇಡಿಂಗ್ ಕಂಪನಿಯವರು ನನ್ನ ವಿರುದ್ಧ ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ವಿಜಯ ಟ್ರೇಡಿಂಗ್ ಕಂಪನಿಯವರು ನನ್ನ ಜೊತೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-**4**ಲ್ಲಿ ತೋರಿಸಿರುವ ದಿನಾಂಕ **30-09-2021**ರ ವ್ಯವಹಾರವನ್ನು ಬಿಟ್ಟು ಉಳಿದ ವ್ಯವಹಾರಗಳು ನೈಜ ವ್ಯವಹಾರವಲ್ಲ ಎಂದರೆ ಸರಿಯಲ್ಲ. ಆದರೂ ಸಹಾ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**